ದಿನಾಂಕ : DATE : 16/2/21
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
12

ಹಳೆಯ ಮಾನದಂಡವೇ ಜಾರಿಯಲ್ಲಿದೆ ಎಂದ ಸಚಿವ | ಸ್ವಯಂಪ್ರೇರಿತವಾಗಿ ಅನರ್ಹ ಕಾರ್ಡ್ ವಾಪಸ್ ನೀಡಲು ಸೂಚನೆ

# ಕಾರ್ಡ್ ಅನರ್ಹ ಕತ್ತಿ ಹೇಳಿಕೆಗೆ ಜನಾಕ್ರೋಶ

■ ವಿಕ ಸುದ್ದಿಲೋಕ ಬೆಂಗಳೂರು 16-2-21

ಬೈಕ್ ಮತ್ತು ಟಿವಿ ಹೊಂದಿರುವವರ ಬಿಪಿಎಲ್ ಕಾರ್ಡ್ ರದ್ದು ಪಡಿಸಲಾಗುವುದು ಎಂಬ ತಮ್ಮ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಆಹಾರ ಸಚಿವ ಉಮೇಶ ಕತ್ತಿ ಸ್ಪಷ್ಟೀಕರಣ ನೀಡಿದ್ದು, ''ಈ ವಿಚಾರದಲ್ಲಿ ಯಾವುದೇ ಹೊಸ ಆದೇಶ ಹೊರಡಿಸಿಲ್ಲ, ಬಿಪಿಎಲ್ ಕಾರ್ಡ್‌ಗೆ ಸಂಬಂಧಿಸಿದಂತೆ ಈ ಹಿಂದಿನ ಮಾನದಂಡವೇ ಜಾರಿಯಲ್ಲಿದೆ,'' ಎಂದಿದ್ದಾರೆ.

ಬಿಪಿಎಲ್ ಕಾರ್ಡ್ ಬಗ್ಗೆ ಬೆಳಗಾವಿಯಲ್ಲಿ ಸಚಿವ ಉಮೇಶ ಕತ್ತಿ ನೀಡಿದ ಹೇಳಿಕೆ ರಾಜ್ಯಾದ್ಯಂತ ಆಕ್ಷೇಪಕ್ಕೆ ಗುರಿಯಾಗಿದೆ.

ಈಗಿನ ಕಾಲದಲ್ಲಿ ಬೈಕ್ ಇಟ್ಟುಕೊಳ್ಳುವುದು ಮೂಲಭೂತ ಅವಶ್ಯಕತೆಯಾಗಿದೆ. ಇದಲ್ಲದೆ ದ್ವಿಚಕ್ರವಾಹನ ಕೊಂಡುಕೊಳ್ಳಲು ಇಂತಹ ಆದ್ಯತಾ ಕುಟುಂಬಗಳಿಗೆ ಸರಕಾರವೇ ಸಾಲ ಮತ್ತು ಸಹಾಯಧನ ಒದಗಿಸುತ್ತಿದೆ. ಇನ್ನು ಜಗತ್ತಿನ ವಿದ್ಯಮಾನದ ಬಗ್ಗೆ ತಿಳಿದುಕೊಳ್ಳಲು ಟಿವಿ ಕೂಡ ಅಗತ್ಯವಿದೆ. ಹಾಗಿರುವಾಗ ಬೈಕ್, ಟಿವಿಯಿರುವ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಇಲ್ಲ ಎಂಬ ಸಚಿವರ ಹೇಳಿಕೆ ಹಾಸ್ಯಾಸ್ಪದ ಎಂದು ಟೀಕೆ ಕೇಳಿ ಬಂತು. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲೂ ವ್ಯಾಪಕ ಚರ್ಚೆಯಾಯಿತು.

ಇದರಿಂದ ಸರಕಾರಕ್ಕೆ ಇರುಸುಮುರುಸು ಆದದ್ದಲ್ಲದೆ ಬಿಜೆಪಿ ವಲಯದಲ್ಲೆ ಕತ್ತಿ ಹೇಳಿಕೆಗೆ ವಿರೋಧ ವ್ಯಕ್ತವಾಯಿತು. ಇದರ ಮಧ್ಯೆ ಸಚಿವ ಕತ್ತಿ ಮಾಧ್ಯಮದ ಎದುರು ಸಿಡಿಮಿಡಿ ಗೊಂಡ ಘಟನೆಯೂ ನಡೆಯಿತು. ಆದರೆ, ಇದು ದೊಡ್ಡ ವಿವಾದವಾಗುವ ಸುಳಿವು ದೊರಕುತ್ತಿದ್ದಂತೆ ಸಚಿವ ಕತ್ತಿ ಸಮಜಾಯಿಷಿ ನೀಡಿದ್ದಾರೆ.



ವಿವಾದದ ಅಲಗಿನಲ್ಲಿ ಕತ್ತಿ

### [illegible]

''ಬಿಪಿಎಲ್ ಕಾರ್ಡ್ ವಿತರಣೆ ಮಾನದಂಡದ ಬಗ್ಗೆ ಈ ಹಿಂದಿನ ಸರಕಾರದ ಅವಧಿಯಲ್ಲಿ ಹೊರಡಿಸಿದ ಆದೇಶ ಜಾರಿಯಲ್ಲಿದೆ. ನಾನು ಅಧಿಕಾರ ವಹಿಸಿಕೊಂಡ ಬಳಿಕ ಯಾವುದೇ ತಿದ್ದುಪಡಿ ಮಾಡಿಲ್ಲ. ಹೊಸ ಆದೇಶವನ್ನೂ ಹೊರಡಿಸಿಲ್ಲ,'' ಎಂದು ಸಚಿವ ಉಮೇಶ್ ಕತ್ತಿ ಸ್ಪಷ್ಟೀಕರಣದಲ್ಲಿ ಉಲ್ಲೇಖಿಸಿದ್ದಾರೆ. ''ಹಾಲಿ ಮಾನದಂಡದ ಹೊರತಾಗಿಯೂ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಅನಧಿಕೃತವಾಗಿ ಬಿಪಿಎಲ್ ಕಾರ್ಡ್ ಪಡೆದಿರುವುದು ಸರಕಾರದ ಗಮನಕ್ಕೆ ಬಂದಿದೆ. ಅಂತಹ ಕುಟುಂಬದವರು ಮಾರ್ಚ್ 31ರ ಒಳಗೆ ಸ್ವಯಂ ಪ್ರೇರಿತವಾಗಿ ಕಾರ್ಡ್ ಹಿಂದಿರುಗಿಸುವಂತೆ ಮನವಿ ಮಾಡಿಕೊಳ್ಳಲಾಗಿದೆ. ಇಲ್ಲದಿದ್ದರೆ ಅಂಥವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುತ್ತದೆ,'' ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

### ಯಾರಿಗೆ ಬಿಪಿಎಲ್ ಅರ್ಹತೆಯಿಲ್ಲ?

- ಸರಕಾರಿ, ಸಾರ್ವಜನಿಕ ಸ್ವಾಮ್ಯದ ಉದ್ದಿಮೆ, ಅನುದಾನಿತ ಸಂಸ್ಥೆಗಳ ನೌಕರರು.
- ಆದಾಯ ತೆರಿಗೆ, ಸೇವಾ ತೆರಿಗೆ, ವ್ಯಾಟ್, ವೃತ್ತಿ ತೆರಿಗೆ ಪಾವತಿಸುವವರು
- ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಮತ್ತು ಅದಕ್ಕೆ ಸಮನಾದ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು.
- ನಗರ ಪ್ರದೇಶದಲ್ಲಿ 1 ಸಾವಿರ ಚದರಡಿಗಿಂತ ಹೆಚ್ಚಿನ ವಿಸ್ತೀರ್ಣದ ಸ್ವಂತ ಪಕ್ಕಾ ಮನೆ ಹೊಂದಿದ ಕುಟುಂಬಗಳು ಅರ್ಹ ಕುಟುಂಬಗಳು ಎನಿಸಿಕೊಳ್ಳುವುದಿಲ್ಲ.
- ಜೀವನೋಪಾಯಕ್ಕಾಗಿ ಓಡಿಸುವ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿಯಂತಹ ವಾಣಿಜ್ಯ ವಾಹನ ಹೊರತು ಪಡಿಸಿದ 4 ಚಕ್ರದ ವಾಹನ ಹೊಂದಿರುವ ಎಲ್ಲ ಕುಟುಂಬಗಳು.
- ವಾರ್ಷಿಕ 1.20 ಲಕ್ಷ ರೂ.ಗಿಂತ ಅಧಿಕ ಆದಾಯವಿರುವ ಕುಟುಂಬಗಳು.



ಸಚಿವ ಉಮೇಶ ಕತ್ತಿಯವರೇ, ನಿಮ್ಮದೇ ಒಂದು ರಾಜ್ಯ ಕಟ್ಟಿ ನೀವೇ ಮುಖ್ಯಮಂತ್ರಿಯಾದಾಗ ಇಂತಹ ತುಘಲಕ್ ದರ್ಬಾರ್ ನಡೆಸಿ. ಈಗ ಕಷ್ಟಪಟ್ಟು ಗಳಿಸಿರುವ ಮಂತ್ರಿಸ್ಥಾನದಲ್ಲಿ ಕೂತು ಜನತೆಗೆ ಒಳ್ಳೆಯದು ಮಾಡಿ. ನಿಮ್ಮ ಅಧಿಕ ಪ್ರಸಂಗತನ ವಿರುದ್ಧ ಜನ ರೊಚ್ಚಿಗೆದ್ದು ಕತ್ತಿ ಬೀಸಿದರೆ ಇದ್ದ ಕುರ್ಚಿಯನ್ನೂ ಬಿಡಬೇಕಾದೀತು.

-**ಸಿದ್ದರಾಮಯ್ಯ** ಪ್ರತಿಪಕ್ಷದ ನಾಯಕ

### [illegible]

ಶಿವಮೊಗ್ಗ ಜಿಲ್ಲಾ ಪ್ರವಾಸದಲ್ಲಿರುವ ಸಿಎಂ ಬಿ.ಎಸ್.ಯಡಿಯೂರಪ್ಪ ಅವರೂ ಕತ್ತಿ ಹೇಳಿಕೆ ಬಗ್ಗೆ ಮಾಹಿತಿ ಪಡೆದುಕೊಂಡರು. ಇಂತಹ ವಿವಾದ ಹುಟ್ಟು ಹಾಕದಂತೆಯೂ ಕರೆ ಮಾಡಿ ಕತ್ತಿ ಅವರಿಗೆ ಸೂಚನೆ ನೀಡಿದರು. ಈ ಹಿನ್ನೆಲೆಯಲ್ಲಿ ಸಚಿವರು ಮಾಧ್ಯಮಕ್ಕೆ ಸಮಜಾಯಿಷಿ ಕಳುಹಿಸಿದರು ಎಂದು ತಿಳಿದು ಬಂದಿದೆ. ಈ ಮಧ್ಯೆ ಇಲಾಖೆ ಅಧಿಕಾರಿಗಳೊಂದಿಗೆ ಸಚಿವ ಕತ್ತಿ ಮಂಗಳವಾರ ಸಭೆ ನಡೆಸಲು ಉದ್ದೇಶಿಸಿದ್ದಾರೆ ಎನ್ನಲಾಗಿದೆ.

## ಆರಂಭದಲ್ಲೇ ವಿವಾದ

**ಬೆಳಗಾವಿ:** ''ಟಿವಿ, ಫ್ರಿಜ್, ಬೈಕ್ ಇದ್ದವರಿಗೆ ರೇಶನ್ ಕಾರ್ಡ್ ಇಲ್ಲ,'' ಎನ್ನುವ ಮೂಲಕ ಆಹಾರ ಸಚಿವ ಉಮೇಶ್ ಕತ್ತಿ ಅವರು ಸಚಿವರಾದ ಆರಂಭದಲ್ಲಿಯೇ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ.

ಉಮೇಶ್ ಕತ್ತಿ ಅವರು ಸ್ಪಷ್ಟನೆ ನೀಡಿದ್ದರೂ ಅವರ ಮೊದಲಿನ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಆಗುತ್ತಿದೆ. ''ಟಿವಿ, ಫ್ರಿಜ್, ಬೈಕ್ ಇರುವವರ ಮನೆಗೆ ಬಂದು ಮತ ಕೇಳಬೇಡಿ'', ಎಂದೂ ಅಣಕಿಸಲಾಗುತ್ತಿದೆ. ಅವರ ಹೇಳಿಕೆ ಸರಕಾರಕ್ಕೂ ಇರಿಸು ಮುರಿಸು ಉಂಟುಮಾಡಿದ್ದಲ್ಲದೆ, ಸ್ವಪಕ್ಷೀಯರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈಗ ವಿವಾದಕ್ಕೆ ತೇಪೆ ಹಚ್ಚು ಪ್ರಯತ್ನ ನಡೆದಿದೆ.

ರೇಶನ್ ಕಾರ್ಡ್ ವಿಚಾರದಲ್ಲಿ ಸಚಿವರು ನೀಡಿದ ಹೇಳಿಕೆ ಬಗ್ಗೆ ಉತ್ತರಿಸಲಾಗದೆ ಅಧಿಕಾರಿಗಳೂ ಗೊಂದಲಕ್ಕೆ ಒಳಗಾಗಿದ್ದಾರೆ. ಈಚೆಗಷ್ಟೇ ಬಿಪಿಎಲ್ ಕಾರ್ಡ್‌ಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭಿಸಲಾಗಿದೆ. ಇಂಥ ಹೊತ್ತಿನಲ್ಲಿ ಸಚಿವರು ಈ ರೀತಿಯಾಗಿ ಹೇಳಿರುವುದರಿಂದ ಜನರ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅಧಿಕಾರಿಗಳೂ ಪೇಚಿಗೆ ಸಿಲುಕಿದ್ದಾರೆ.

**ಹೊಸದೇನಲ್ಲ:** ಬೇಸರ, ತ್ಯಾಗ, ಸಿಟ್ಟುಗಳನ್ನೆಲ್ಲ ಸಹಿಸಿಕೊಂಡು ಉಮೇಶ್ ಕತ್ತಿ ಅವರು ಸಚಿವ ಸ್ಥಾನ ಪಡೆದಿದ್ದಾರೆ. ಆದರೆ, ಸಚಿವರಾದ ಆರಂಭದಲ್ಲಿಯೇ ಅಪೂರ್ಣ ಮಾಹಿತಿಯ ಹೇಳಿಕೆ ನೀಡಿ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ. ಹಾಗಂತ ಉಮೇಶ್ ಕತ್ತಿ ಅವರಿಗೆ ವಿವಾದಗಳು ಹೊಸದೇನಲ್ಲ. ಹಿಂದೆಯೂ ಉತ್ತರ ಕರ್ನಾಟಕ ಅಭಿವೃದ್ಧಿ ವಿಚಾರವಾಗಿ ಪದೇ ಪದೆ ಪ್ರತ್ಯೇಕ ರಾಜ್ಯದ ಬಗ್ಗೆ ಮಾತನಾಡಿ ವಿವಾದಕ್ಕೆ ಒಳಗಾಗಿದ್ದರು.